ಓ.ಎಸ್.ನಂಃ 114/2015

**ಡಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 24.04.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ನನ್ನ ನಿವೇಶನ ಸಂಖ್ಯೆ 5. ಅದರ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿ ಮತ್ತು ದಕ್ಷಿಣೋತ್ತರ 50 ಅಡಿ ಇದೆ. ಸದರಿ ನಿವೇಶನವನ್ನು ನಾನು ಪುಟ್ಟಬಸಪ್ಪ ಬಿನ್ ಮಲ್ಲಪ್ಪರವರಿಂದ ಕ್ರಯಕ್ಕೆ ಪಡೆದಿದ್ದೇನೆ. ಸದರಿ ನಿವೇಶನ ಪುಟ್ಟಬಸಪ್ಪ ಬಿನ್ ಮಲ್ಲಪ್ಪರವರಿಗೆ ಪಂಚಾಯಿತಿಯಿಂದ ಮಂಜೂರಾಗಿತ್ತು. ಆ ಬಗ್ಗೆ ನಾನು ದಾಖಲೆಗಳನ್ನು ಪಡೆದಿಲ್ಲ. ಸಾಕ್ಷಿ ಮುಂದುವರೆದು ಸೋಮಹಳ್ಳಿ ಗ್ರಾಮ ಪಂಚಾಯಿತಿ ಪುಟ್ಟಬಸಪ್ಪ ಬಿನ್ ಮಲ್ಲಪ್ಪರವರಿಗೆ ಸದರಿ ನಿವೇಶನವನ್ನು ಮಂಜೂರು ಮಾಡಿತ್ತು ಎಂದು ನುಡಿಯುತ್ತಾರೆ. ರಾಜೀವ್ ಗಾಂಧಿ ವಸತಿ ನಿಗಮದಿಂದ ನಿವೇಶನ ಮಂಜೂರಾದರೆ ಹಕ್ಕು ಪತ್ರ ನೀಡುತ್ತಾರೆ ಎಂದರೆ ನಿಜ. ಪುಟ್ಟಬಸಪ್ಪ ಬಿನ್ ಮಲ್ಲಪ್ಪರವರು ನಮಗೆ ಕಂದಾಯ ರಶೀದಿಗಳನ್ನು ನೀಡಿದ್ದರು. ಅವುಗಳನ್ನು ಹಾಜರುಪಡಿಸಿದ್ದೇನೆ.

ದಾವಾ ಸ್ವತ್ತನ್ನು ನನ್ನ ಮಗಳ ಹೆಸರಿಗೆ ವರ್ಗಾಹಿಸಿದ್ದೇನೆ ಎಂದರೆ ಸರಿ. 1994 ರಲ್ಲಿ ದಾವಾ ಸ್ವತ್ತನ್ನು ನನ್ನ ಮಗಳ ಹೆಸರಿಗೆ ವರ್ಗಾಹಿಸಿದ್ದೇನೆ. ನನ್ನ ಮಗಳ ಹೆಸರಿಗೆ ಖಾತಾ ಆಗಿದೆ. 18 ವರ್ಷಗಳ ಹಿಂದೆ ದಾವಾ ಸ್ವತ್ತಿನಲ್ಲಿ ಮನೆ ನಿರ್ಮಿಸಿದ್ದೇನೆ. ನಮ್ಮ ಮನೆಯ ನಕ್ಷೆ ಇದೆ. ಸದರಿ ನಕ್ಷೆಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ನಕ್ಷೆ ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ನಿವೇಶನದ ದಕ್ಷಿಣದ ಕಡೆಗೆ ರಸ್ತೆ ಇದೆ. ನನ್ನ ನಿವೇಶನದ ಪೂರ್ವಕ್ಕೆ ಸುಮಾರು 11 ನಿವೇಶನಗಳು ಇವೆ. ನಮ್ಮ ನಿವೇಶನದ ಎದುರುಗಡೆ ನಿವೇಶನ ಸಂಖ್ಯೆ 12 ರಿಂದ 16 ರರವರೆಗೆ ಇದೆ. ನಮ್ಮ ನಿವೇಶನದ ಎದುರುಗಡೆ ಮಧ್ಯಭಾಗದಲ್ಲಿ ಪೂರ್ವ-ಪಶ್ಚಿಮಾಭಿಮುಖವಾಗಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ 22 ಅಡಿ ಇದೆ. ಸದರಿ ರಸ್ತೆ ಪೂರ್ವ-ಪಶ್ಚಿಮವಾಗಿ ನೇರವಾಗಿ ಇದೆ.

ನಿವೇಶನ ಮಾಡುವ ಮುನ್ನಾ ಸದರಿ ಜಾಗವನ್ನು ರಸ್ತೆಗಾಗಿ ಬಿಟ್ಟಿದ್ದರು ಎಂದರೆ ಸರಿ. ಆ ಕಾರಣ ನನ್ನ ನಿವೇಶನದ ಮುಂಭಾಗದಲ್ಲಿ ಇರುವ ರಸ್ತೆ ಸಾರ್ವಜನಿಕ ರಸ್ತೆ ಎಂದರೆ ಸರಿ. ಅದು ಸಾರ್ವಜನಿಕರ ಉಪಯೋಗಕ್ಕಾಗಿ ಮಿಸಲಿರುವ ರಸ್ತೆ ಎಂದರೆ ಸರಿ. ನನ್ನ ಮಗಳು ರಸ್ತೆಯನ್ನು ಬಿಟ್ಟು ಮನೆ ಕಟ್ಟಿದ್ದಾಳೆ. 5 ಅಡಿ ಸೇಟ್ ಬ್ಯಾಕ್ ಬಿಟ್ಟು ಮನೆ ಕಟ್ಟಲಾಗಿದೆ. ವಾದಿಯ

ನಿವೇಶನದ ಸಂಖ್ಯೆ: 12. ನನ್ನ ನಿವೇಶನದ ಮುಂಭಾದಲ್ಲಿರುವ ನಿವೇಶನಗಳ ವಿಸ್ತೀರ್ಣ 50X40. ನಿವೇಶನ ಸಂಖ್ಯೆ: 12 ರ ವಿಸ್ತೀರ್ಣ 50X40 ಎಂದು ಹೇಳುತ್ತಿದ್ದರು. ನನಗೆ ಖುದ್ದು ಗೊತ್ತಿಲ್ಲ. ವಾದಿಯ ತಾತನ ಹೆಸರು ಪುಟ್ಟಪ್ಪ. ನಿವೇಶನ ಸಂಖ್ಯೆ: 12 ರ ವಿಸ್ತೀರ್ಣ 50X40 ಅಡಿ ಎಂದರೆ ನನಗೆ ಗೊತ್ತಿಲ್ಲ. 1973 ರಲ್ಲಿ ಸದರಿ ನಿವೇಶನಗಳನ್ನು ಮರಳಾಪುರ ಗ್ರಾಮ ಪಂಚಾಯಿತಿಯಿಂದ ಹಂಚಿಕೆ ಮಾಡಲಾಗಿತ್ತು ಎಂದರೆ ಸರಿ. ನನ್ನ ಕ್ರಯದಾರರಿಗೂ 1973 ರಲ್ಲಿ ನಿವೇಶನ ಹಂಚಿಕೆಯಾಗಿತ್ತು ಎಂದರೆ ಸರಿ.

ರಾಜೀವ್ ಗಾಂಧಿ ವಸತಿ ನಿಗಮದಿಂದ ಸದರಿ ನಿವೇಶನ ಹಂಚಿಕೆಯಾಗಿಲ್ಲ ಎಂದರೆ ಸರಿ. 2001–02 ರಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ಅಸ್ತಿತ್ವಕ್ಕೆ ಬಂತು ಎಂದರೆ ಸರಿ. ನನ್ನ ಮಗಳು ರಾಜೀವ್ ಗಾಂಧಿ ವಸತಿ ನಿಗಮದಿಂದ ಮನೆ ನಿರ್ಮಿಸಲು ಸಹಾಯ ದನ ಪಡೆದಿದ್ದರು. ನನ್ನ ನಿವೇಶನ ವಾದಿ ನಿವೇಶನದ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ವಾದಿಯ ಪೂರ್ವ ದಿಕ್ಕಿಗೆ ಇರುವ ನಿವೇಶನಗಳ ವಿಸ್ತೀರ್ಣ 50X40 ಅಡಿ ಎಂದರೆ ಸರಿ. ರಸ್ತೆಗೆ ಮಿಸಲಾಗಿದ್ದ ಜಾಗವನ್ನು ಒತ್ತುವರಿ ಮಾಡಿ ನನ್ನ ಮಗಳು ಮನೆ ನಿರ್ಮಿಸಿದ್ದಾಳೆ ಎಂದರೆ ಸರಿಯಲ್ಲ. ಸದರಿ ಒತ್ತುವರಿಯಿಂದ ವಾದಿಗೆ ತಿರುಗಾಡಲು ಅಡ್ಡಿಯಾಗಿದೆ ಎಂದರೆ ಸರಿಯಲ್ಲ. ನ್ಯಾಯಾಲಯದ ನಿಯೋಗಿಯನ್ನು ಕಳುಹಿಸಿ ನಾವು ಒತ್ತುವರಿ ಮಾಡಿಕೊಂಡಿದ್ದರೆ ಪರಿಶೀಲಿಸಬಹುದು. ನಾವು ನಮ್ಮ ನಿವೇಶನದ ಮುಂದೆ ಇರುವ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ